ವಿಜಯ ಕರ್ನಾಟಕ VK

# ವಿಕ ಡೈಲಿ ಡಾಕ್ಟರ್



**ಡಾ.ಸಿ.ಎನ್.ಮಂಜುನಾಥ್**
ಮುಖ್ಯಸ್ಥರು, ಜಯದೇವ ಹೃದ್ರೋಗ ವಿಜ್ಞಾನ, ಸಂಶೋಧನಾ ಸಂಸ್ಥೆ.



## ಎದೆ ಜತೆಗೆ ಮೈಕೈಯೂ ನೋವು

**ಪ್ರಶ್ನೆ:** ನನಗೆ 42 ವರ್ಷ. ಬಿಪಿ ನಾರ್ಮಲ್ ಇದೆ. ಆದರೆ, ಆಗಾಗ ಎದೆನೋವು ಕಾಣಿಸಿಕೊಳ್ಳುತ್ತದೆ. ಎದೆ ನೋವು ಬಂದಾಗ ಮೈಕೈ ನೋವು ಬರುತ್ತದೆ. ಕನಿಷ್ಠ 10 ನಿಮಿಷ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಕೆಮ್ಮು ಬಂದ ಬಳಿಕ ನೋವು ಕಡಿಮೆಯಾಗುತ್ತದೆ. ಇದಕ್ಕೆ ಕಾರಣವೇನು? ಇದು ಹೃದಯ ಸಂಬಂಧಿ ಕಾಯಿಲೆಯೇ ? ಪರಿಹಾರ ತಿಳಿಸಿ. **- ದೇವಿ** ಭದ್ರಾವತಿ

**ಉತ್ತರ:** ನೀವೇ ತಿಳಿಸಿರುವಂತೆ ನಿಮಗೆ ಬಿಪಿ ಇಲ್ಲ. ಎದೆನೋವು ಬಂದಾಗ ಮೈಕೈ ನೋವು ಏಕೆ ಬರುತ್ತದೆ ಎಂಬುದನ್ನು ತಿಳಿಯಬೇಕು. ಮೈಕೈ ನೋವು ಹೃದಯಕ್ಕೆ ಸಂಬಂಧಿ ಕಾಯಿಲೆಯ ಲಕ್ಷಣಗಳಲ್ಲ. ನಡೆದಾಡುವಾಗ, ಓಡುವಾಗ, ಮೆಟ್ಟಿಲು ಹತ್ತುವಾಗ ಎದೆ ನೋವು ಬಂದರೆ ಅದು ಹೃದಯ ಸಂಬಂಧಿ ಕಾಯಿಲೆ.



ನಿಮಗಿರುವ ಲಕ್ಷಣಗಳನ್ನು ನೋಡಿದರೆ ಹೃದ್ರೋಗ ಸಮಸ್ಯೆ ಇದ್ದಂತೆ ಇಲ್ಲ. ಆದರೂ ನೀವು ಟ್ರೇಡ್‌ಮಿಲ್ ಟೆಸ್ಟ್ ಹಾಗೂ ಇಸಿಜಿ ಪರೀಕ್ಷೆ ಮಾಡಿಸಿಕೊಂಡರೆ ಹೃದಯ ಸಂಬಂಧಿ ಕಾಯಿಲೆ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

### ನೀವೂ ಪ್ರಶ್ನೆ ಕೇಳಿ...

**ವಿಕ ಡೈಲಿ ಡಾಕ್ಟರ್** ಅಂಕಣದ ಮೂಲಕ ಪ್ರತಿದಿನ ಆರೋಗ್ಯ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ತಜ್ಞ ವೈದ್ಯರಿಂದ ಪರಿಹಾರ ಪಡೆದುಕೊಳ್ಳಬಹುದು.

**ವಾಟ್ಸ್ಆ್ಯಪ್: 7899578866**